**ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ,**

**ರಾಣೇಬೆನ್ನೂರು.**

**Crl.Misc. No.390/2024**

| | | | |
|---|---|---|---|
| ಸಾಕ್ಷಿದಾರರ ಹೆಸರು | – | ರಂಜಿತಾ ಊರ್ಫ್ ಚೇತನಾ ಶಾಮನೂರು | ***PW-1*** |
| ಗಂಡನ ಹೆಸರು | – | ವಸಂತ | |
| ವಯಸ್ಸು | – | 25 ವರ್ಷ | |
| ಉದ್ಯೋಗ | – | ಗೃಹಿಣಿ | |
| ವಾಸ | – | ರಟ್ಟಿಹಳ್ಳಿ ರೋಡ್, ತುಮ್ಮಿನಕಟ್ಟಿ ತಾಃ ರಾಣೇಬೆನ್ನೂರು | |

**ದಿನಾಂಕಃ06-10-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಅರ್ಜಿದಾರ ಪರ ವಕೀಲರಾದ ಶ್ರೀ .ಆರ್.ವಿ.ಆರ್. ವಕೀಲರಿಂದಃ**

ಎದುರುದಾರರು ನನ್ನ ಗಂಡನಾಗಿದ್ದು. ನನ್ನ ಮತ್ತು ಎದುರುದಾರರ ಮದುವೆ ದಿಃ 27-03-2023 ರಂದು ರಾಣೇಬೆನ್ನೂರಿನ ಎಂ.ಎಂ.ಫಂಕ್ಷನ್ ಹಾಲ್ ನಲ್ಲಿ ನಮ್ಮ ಹಿಂದೂ ಧರ್ಮದ ಸಂಪ್ರದಾಯದ ಪ್ರಕಾರ ಗುರು-ಹಿರಿಯರ ಸಮಕ್ಷಮ ನೆರವೇರಿರುತ್ತದೆ .

ಮದುವೆಯ ಕಾಲಕ್ಕೆ ನನ್ನ ತಂದೆ-ತಾಯಿ ಎದುರುದಾರರಿಗೆ 2 ತೊಲ ಬಂಗಾರದ ಚೈನ್ , 1 ತೊಲ ಬಂಗಾರದ ಉಂಗುರ ಹಾಗೂ 4 ತೊಲ ಮಾಂಗಲ್ಯ ಚೈನ್, ರೂ.2,00,000/- ವರದಕ್ಷಿಣೆ ಮತ್ತು ಮದುವೆಯ ಖರ್ಚಿಗೆ ರೂ.1,00,000/- ಹಣ ಕೊಟ್ಟಿದ್ದರು. ಮದುವೆಯ ನಂತರ ನಾನು ನನ್ನ ಗಂಡನ ಮನೆಯಾದ ರಾಣೇಬೆನ್ನೂರಿಗೆ ವೈವಾಹಿಕ ಜೀವನ ಮಾಡಲು ಹೋಗಿರುತ್ತೇನೆ. ಎದುರುದಾರರ ಮನೆಯಲ್ಲಿ ಅವರ ತಂದೆ-ತಾಯಿ, ಎದುರುದಾರರ ಅಕ್ಕ, ಅಣ್ಣ ಹಾಗು ಅಕ್ಕನ ಮಗ ಎಲ್ಲರೂ ಒಟ್ಟಿಗೆ ವಾಸವಾಗಿರುತ್ತಾರೆ. ಎದುರುದಾರರು ನನ್ನನ್ನು 3 ತಿಂಗಳು ಚೆನ್ನಾಗಿ ನೋಡಿಕೊಂಡಿರುತ್ತಾರೆ. ನಾನು ನನ್ನ ತಂದೆಗೆ ಒಬ್ಬಳೆ ಮಗಳಾಗಿದ್ದರಿಂದ ಇನ್ನೂ ಹೆಚ್ಚಿನ ವರದಕ್ಷಿಣೆ ಓಡವೆ ತೆಗೆದು ಕೊಂಡು ಬಾ ಎಂದು ಎದುರುದಾರರು ನನಗೆ ಹಿಂಸೆ ಕೊಡಲು ಪ್ರಾರಂಭಿಸಿರುತ್ತಾರೆ. ನನ್ನ ತಂದೆ ಅನುಕೂಲಸ್ಥರು ಆಗಿದ್ದರೂ ಸಹ ಅವರಿಗೆ ಆರೋಗ್ಯ ಸಮಸ್ಯೆ ಇದ್ದುರಿಂದ ನಾನು ಅವರಿಂದ ಯಾವುದೇ ಹಣ ಓಡವೆ ತರುವುದಿಲ್ಲ ಎಂದು ಎದುರುದಾರರಿಗೆ ಹೇಳಿರುತ್ತೇನೆ.

ಎದುರುದಾರರ ಅಕ್ಕ ಮತ್ತು ಅವರ ತಾಯಿ ನನ್ನ ಗಂಡನಿಗೆ ಇಲ್ಲಸಲ್ಲದ ಚಾಡಿ ಹೇಳಿ ನನಗೆ ಆಸ್ತಿ ತೆಗೆದು ಕೊಂಡು ಬರಲು ಹೇಳು ಎಂದು ನನಗೆ ಹೊಡೆಸುತ್ತಿದ್ದರು. ನನ್ನ ಗಂಡ ವಿಪರೀತ ಹಣ ಖರ್ಚು ಮಾಡಿ ಊರಿನಲ್ಲೆಲ್ಲಾ ಸಾಲ ಮಾಡಿಕೊಂಡಿದ್ದರು ಅದನ್ನು ಕೇಳಿದ್ದಕ್ಕೆ ಅದೆಲ್ಲಾ ನಿನಗೆ ಏಕೆ ಎಂದು ಹೊಡೆಯುತ್ತಿದ್ದರು. ಸರಿಯಾದ ಸಮಯಕ್ಕೆ ಮನೆಗೆ ಬರುತ್ತಿರಲಿಲ್ಲ. ರಾತ್ರಿ 10 ರಿಂದ 11 ಗಂಟೆಯಾದರೂ ಸಹ ಮನೆಗೆ ಬರುತ್ತಿರಲಿಲ್ಲ. ನಾನು ಮಾಡಿದ ಅಡುಗೆಯನ್ನು ಸಂಶಯದಿಂದ ನೋಡಿ ಯಾರೂ ಊಟ ಮಾಡುತ್ತಿರಲಿಲ್ಲ ನಾನು ಅದನ್ನು ಮುಸರಿಗೆ ಹಾಕಬೇಕಾಗಿತ್ತು. ನನಗೆ ನನ್ನ ತಂದೆ-ತಾಯಿ ಯವರ ಜೊತೆ ಮಾತನಾಡಲೂಾ ಸಹ ಬಿಡುತ್ತಿರಲಿಲ್ಲ. ನನ್ನ ಸ್ನೇಹಿತರು ಮತ್ತು ಸಂಬಂಧಿಕರ ಜೊತೆ ಮಾತನಾಡಲೂ ಸಹ ಬಿಡುತ್ತಿರಲಿಲ್ಲ. ನಾನು ಊರಿಗೆ ಹೋಗುತ್ತೇನೆ ಎಂದು ಹೇಳಿದರೂ ಸಹ ಬಿಡುತ್ತಿರಲಿಲ್ಲ.

ಎದುರುದಾರರು ಪ್ರತಿ ದಿನ ಮಾತ್ರೆಗಳನ್ನು ತೆಗೆದು ಕೊಳ್ಳುತ್ತಿದ್ದರು ಅದರ ಬಗ್ಗೆ ವಿಚಾರಿಸಿದಾಗ ನನಗೆ ಯಾವುದೇ ಮಾಹಿತಿ ಕೊಟ್ಟಿರುವುದಿಲ್ಲ. ಅದೆಲ್ಲಾ ನಿನಗೆ ಏಕೆ ಎಂದು ಹೇಳುತ್ತಿದ್ದರು. ಈ ಎಲ್ಲಾ ವಿಚಾರವನ್ನು ನಾನು ನನ್ನ ತಂದೆ-ತಾಯಿಯವರ ಬಳಿ ಹೇಳಿದ್ದೇನು. ನನ್ನ ತಂದೆ ಬಂದು ನನ್ನ ಗಂಡನಿಗೆ ಮತ್ತು ಅವರ ಮನೆಯವರಿಗೆ ಬುದ್ಧಿ ಹೇಳಿದ್ದಕ್ಕೆ ಅವರ ಮೇಲೆಯೇ ಸಿಟ್ಟು ಮಾಡಿಕೊಂಡಿರುತ್ತಾರೆ. ತುಮ್ಮಿನಕಟ್ಟೆ ಊರಿನಲ್ಲಿ ದೇವತೆ ಹಬ್ಬಕ್ಕೆ ಕರೆಯಲು ನನ್ನ ತಂದೆ ನಮ್ಮ ಮನೆಗೆ ಬಂದಿದ್ದರು ಆಗ ನನ್ನ ತಂದೆ ನನ್ನ ತಾಯಿಗೆ ಹುಷಾರಿಲ್ಲ 15 ದಿನ ಮುಂಚಿತವಾಗಿ ಕಳುಹಿಸಿಕೊಡಿ ಎಂದು ಹೇಳಿದ್ದಕ್ಕೆ ನನ್ನ ಗಂಡ ನಾನು ಕಳುಹಿಸುವುದಿಲ್ಲ ಎಂದು ಹೇಳಿರುತ್ತಾನೆ. ಏಕಾಏಕಿ ಬಂದು ನನ್ನ ತಂದೆಯ ಕೊರಳ ಪಟ್ಟಿ ಹಿಡಿದು ಹೊಡೆದು ನನ್ನ ಗಂಡ ನನ್ನ ತಂದೆಗೆ ಅವಮಾನ ಮಾಡಿರುತ್ತಾನೆ. ನಾನು ಊರಿಗೆ ಹೋದಾಗಲೂ ನನ್ನ ಗಂಡ ನನ್ನ ಬಸ್ ನ್ನು ಪಾಲೋ ಮಾಡಿಕೊಂಡು ಬರುತ್ತಿದ್ದ ಆಗಗ ಸುಮ್ಮನೆ ಪೋನ್ ಮಾಡಿ ಎಲ್ಲಿ ಇದ್ದಿಯಾ ಎಂದು ವಿಚಾರಿಸುತ್ತಿದ್ದ. ರಾತ್ರಾರಾತ್ರಿಯೇ ನನ್ನನ್ನು ಊರಿಗೆ ಕರೆದು ಕೊಂಡು ಬರುತ್ತಿದ್ದ. ತವರು ಮನೆಯಲ್ಲಿ ಒಂದು ದಿನವೂ ಇರಲು ಬಿಡುತ್ತಿರಲಿಲ್ಲ.

ನಾನು ತವರು ಮನೆಗೆ ಹೋಗಿದ್ದಾಗ ನನ್ನ ಬೀರುವಿನಲ್ಲಿದ್ದ ಚೈನ್ ಸರ ಮತ್ತು ಕಿವಿ ಓಲೆ, ಉಂಗುರ ವನ್ನು ತೆಗೆದುಕೊಂಡು ಹೋಗಿ ಮುತ್ತೂಟ್ ಫೈನಾನ್ಸನಲ್ಲಿ ಅಡವು ಇಟ್ಟಿರುತ್ತಾರೆ. ಬೈಕ್ ನ್ನೂ ಸಹ ನಮಗೆ ಗೊತ್ತಿಲ್ಲದ ಹಾಗೆ ನನ್ನ ತವರು ಮನೆಯ ಊರಿನಲ್ಲೆ ಅಡವಿಟ್ಟಿದ್ದರು. ಅದನ್ನು ನನ್ನ ತಂದೆಯವರು ದುಡ್ಡು ಕೊಟ್ಟು ಬಿಡಿಸಿ ಕೊಟ್ಟಿರುತ್ತಾರೆ. ಸಾಲ ಏಕೆ ಮಾಡಿದ್ದೀರಾ ಎಂದು ಪ್ರಶ್ನೆ ಮಾಡಿದರೆ ನನಗೆ ಹೊಡೆಯುವುದು ಬಡಿಯುವುದು ಮಾಡುತ್ತಿದ್ದರು. ಮಾನ ಮರ್ಯಾದೆ ಹೋಗುತ್ತದೆ ಎಂದು ನಾನು ಪೋಲೀಸ್ ಠಾಣೆಗೆ

ಹೋಗಿ ದೂರು ಕೊಡದೆ ತಡೆದು ಕೊಂಡು ಇದ್ದೇನು. ನನ್ನ ಗಂಡನ ಹಿಂಸೆ ಹೆಚ್ಚಾಗಿದ್ದರಿಂದ ನಾನು ತಾಳಲಾರದೆ ಗಂಡನ ಮನೆಯಿಂದ ತಪ್ಪಿಸಿಕೊಂಡು ಪೋಲಿಸ್ ಠಾಣೆಗೆ ದೂರು ಕೊಡಲು ಹೋಗುತ್ತಿದ್ದಾಗ ನನ್ನ ಗಂಡನ ಅಕ್ಕನ ಮಗನಿಗೆ ಪೋಲಿಸರು ತಿಳುವಳಿಕೆ ಹೇಳಿದ್ದರಿಂದ ನನ್ನನ್ನು ತವರು ಮನೆಗೆ ಕರೆದು ಕೊಂಡು ಹೋಗಿ ಬಿಟ್ಟು ಬಂದಿರುತ್ತಾರೆ. 02-05-2024 ರಂದು ನನ್ನನ್ನು ತವರು ಮನೆಗೆ ಕರೆದು ಕೊಂಡು ಹೋಗಿ ಬಿಟ್ಟು ಬಂದಿರುತ್ತಾರೆ. ತುಮ್ಮಿನಕಟ್ಟಿ ಪೋಲಿಸ್ ಠಾಣೆಯಲ್ಲಿ ಪಂಚರ ಸಮಕ್ಷಮ ಪಂಚಾಯಿತಿ ಆಗಿರುತ್ತದೆ. ನನ್ನ ಗಂಡನ ತಂದೆ ನನ್ನ ತಂದೆಗೆ ನಿನ್ನ ಮಗಳನ್ನು ತವರು ಮನೆಯಲ್ಲಿಯೇ ಇಟ್ಟುಕೋ ಕಳುಹಿಸುವುದು ಬೇಡ ಎಂದು ಹೇಳಿರುತ್ತಾರೆ. ನಂತರ ನನ್ನ ಗಂಡ ವಕೀಲರ ಮೂಲಕ ನನಗೆ ನೋಟಿಸ್ ಕಳುಹಿಸಿ ಜೀವನ ಮಾಡಲು ಬರಬೇಕು ಎಂದು ಹೇಳಿರುತ್ತಾರೆ. ಅದಕ್ಕೆ ನಾನು ಉತ್ತರ ಕಳುಹಿಸಿರುತ್ತೇನೆ.

ನನ್ನ ಗಂಡ ಎಲೆಕ್ಟ್ರಿಷಿಯನ್ ಕೆಲಸ ಮಾಡುತ್ತಾರೆ. ತಿಂಗಳಿಗೆ 50 ರಿಂದ 60 ಸಾವಿರ ದುಡಿಯುತ್ತಾರೆ. ರಾಣೇಬೆನ್ನೂರಿನ ಗೌರಿ-ಶಂಕರ ನಗರದಲ್ಲಿ ನನ್ನ ಗಂಡನ ಹೆಸರಿಲ್ಲಿ ಮೂರು ಮನೆಗಳು ಇರುತ್ತವೆ. ಆಲದಕಟ್ಟಿ ಗ್ರಾಮದಲ್ಲಿ ನನ್ನ ಗಂಡನ ಹೆಸರಿನಲ್ಲಿ ಜಮೀನೂ ಸಹ ಇರುತ್ತದೆ.

ನನಗೆ ಔಷೋದೋಪಚಾರಕ್ಕಾಗಿ , ಬಟ್ಟೆ-ಬರೆ ಜೀವನ ನಡೆಸುವುದಕ್ಕಾಗಿ ತಿಂಗಳಿಗೆ 30 ಸಾವಿರದ ಹಣದ ಅವಶ್ಯಕತೆ ಇರುತ್ತದೆ. ಆದ್ದರಿಂದ ಸೂಕ್ತ ಜೀವನಾಂಶದ ಆದೇಶ ಮಾಡಬೇಕೆಂದು ಮಾನ್ಯ ನ್ಯಾಯಾಲಯದಲ್ಲಿ ವಿನಂತಿಸಿಕೊಳ್ಳುತ್ತೇನೆ.

ಅರ್ಜಿಯ ಜೊತೆಗೆ ದಾಖಲಾತಿಗಳನ್ನು ಹಾಜರು ಪಡಿಸಿರುತ್ತೇನೆ.

ಸಾಕ್ಷಿ ವಿವಾಹ ಆಮಂತ್ರಣ ಪತ್ರಿಕೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು, ವಿವಾಹ ಸಮಯದಲ್ಲಿ ತೆಗೆದ 4 ಭಾವಚಿತ್ರಗಳನ್ನು ಹಾಜರು ಪಡಿಸಿ ಅವುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-2 ರಿಂದ 5 ಎಂದು ಗುರುತಿಸಲಾಯಿತು. ಸರ್ವೆ ನಂ.14/2 ಆ ಪಹಣಿ ಪತ್ರಿಕೆ ಹಾಜರು ಪಡಿಸಿದ್ದು ಅದನ್ನು ನಿಪಿ-6 ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಗೆ ಸಮಯವಕಾಶ ಕೋರಿರುವುದರಿಂದ ಮುಂದೂಡಲಾಗಿದೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ. ಹೇ. ಕೇ. ಸರಿ ಇದೆ.

ಸಹಿ/-

1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ ರಾಣೇಬೆನ್ನೂರು.